ಚಿಣ್ಣರಲೋಕ

# ಪಂಚತಂತ್ರ ಕಥೆ

## ಮೂರ್ಖ ಪಂಡಿತರು

ಒಂದು ಊರಿನಲ್ಲಿ ನಾಲ್ಕು ಜನ ಸ್ನೇಹಿತರಿದ್ದರು. ಅವರಲ್ಲಿ ಮೂವರು ಪಂಡಿತರು. ಇನ್ನೊಬ್ಬನು ಕಲಿತಿಲ್ಲದಿದ್ದರೂ ಬುದ್ಧಿವಂತ. ಅವರೆಲ್ಲರೂ ದೂರದ ದೇಶಗಳಿಗೆ ಹೋಗಿ, ಹಣ ಗಳಿಸಬೇಕೆಂದು ನಿಶ್ಚಯಮಾಡಿದರು.


ಹೊರಡುವ ಮುನ್ನ ಮೂವರು ಪಂಡಿತರು ಒಟ್ಟು ಸೇರಿ ಹೀಗೆ ವಿಚಾರ ಮಾಡಿದರು: " ನಾವು ಪಂಡಿತರು. ನಮಗೆ ಹಣ ಸಿಗುತ್ತದೆ. ಈ ನಾಲ್ಕನೆಯವನು ಮೂಢ. ಇವನ ಜೊತೆಗೆ ಹಣವನ್ನು ಹಂಚಿಕೊಳ್ಳುವುದೇ? ಸಾಧ್ಯವಿಲ್ಲ. ಇವನನ್ನು ಕರೆದುಕೊಂಡು ಹೋಗುವುದು ಬೇಡ." ಆದರೆ ದೇಶವಿದೇಶಗಳನ್ನು ನೋಡಲೆಂದು ಮಾತ್ರ ಕರೆದುಕೊಂಡು ಹೋಗಲು ಒಪ್ಪಿಕೊಂಡರು.

ದಾರಿಯಲ್ಲಿ ಒಂದು ಕಾಡು. ಒಂದು ಕಡೆ, ಸತ್ತ ಸಿಂಹದ ಮೂಳೆಗಳು ಬಿದ್ದಿದ್ದವು. ಒಬ್ಬ ಪಂಡಿತ ಅದರ ಅಸ್ಥಿಗಳನ್ನು ಜೋಡಿಸುವೆ ಎಂದು ಹೇಳಿ ಮಂತ್ರ ಹೇಳಿ ಜೋಡಿಸಿದ. ಇನ್ನೊಬ್ಬ ರಕ್ತ ಮಾಂಸಗಳನ್ನು ಸೇರಿಸುವೆ ಎಂದು ಸೇರಿಸಿದ. ಮೂರನೆಯವನು ಅದಕ್ಕೆ ಜೀವ ತುಂಬುವೆ ಎಂದು ಕೊಚ್ಚಿಕೊಂಡು, ಹಾಗೆ ಮಾಡುವವನಿದ್ದ. ಆಗ ನಾಲ್ಕನೆಯ ಸ್ನೇಹಿತ ಹೇಳಿದ: "ಇದೇನು ಮಾಡುತ್ತಿದ್ದೀಯೆ. ಈ ಸಿಂಹಕ್ಕೆ ಜೀವ ಬಂದರೆ ನಮ್ಮನ್ನೆಲ್ಲ ಕೊಂದು ತಿನ್ನುತ್ತದೆ."

ಆಗ ಆ ಮೂವರು ಪಂಡಿತರು ಅವನಿಗೆ ಛೀಮಾರಿ ಹಾಕಿದರು: "ನೀನು ದಡ್ಡ. ನಿನಗೇನು ಗೊತ್ತು? ನಮ್ಮ ಪಾಂಡಿತ್ಯ ನೋಡು. ನಮ್ಮ ಮಂತ್ರಶಕ್ತಿ ನೋಡು." ಆಗ ಸುಬುದ್ಧಿ ಎಂಬ ಹೆಸರಿನ ಆ ನಾಲ್ಕನೆಯ ಸ್ನೇಹಿತ ಆ ಪಂಡಿತರಿಗೆ ಹೇಳಿದ: "ಸ್ವಲ್ಪ ತಡೆಯಿರಿ. ನಾನು ಮರವನ್ನು ಏರುವೆ. ನಂತರ ನಿಮ್ಮ ಪಾಂಡಿತ್ಯ ಪ್ರದರ್ಶನ ನಡೆಯಲಿ." ಅವನು ಮರ ಏರಿ ಕುಳಿತ. ಈಗ ಮೂರನೆಯ ಪಂಡಿತ ಸಿಂಹಕ್ಕೆ ಜೀವ ಬರಿಸಿದ. ಅದು ಮೇಲೆದ್ದು ನಿಂತುಕೊಂಡಿತು. ಅದಕ್ಕೆ ಭಾರೀ ಹಸಿವಾಗಿತ್ತು. ಹತ್ತಿರದಲ್ಲೇ ಇದ್ದ ಆ ಮೂರ್ಖ ಪಂಡಿತರನ್ನು ಕೊಂದು ಮಾಂಸವನ್ನು ತಿಂದಿತು. ಅದಕ್ಕೇ ಹೇಳುವುದು:

**ಅಪಿ ಶಾಸ್ತ್ರೇಷು ಕುಶಲಾ ಲೋಕಾಚಾರವಿವರ್ಜಿತಾಃ ।**
**ಸರ್ವೇ ತೇ ಹಾಸ್ಯತಾಂ ಯಾಂತಿ, ಯಥಾ ತೇ ಮೂರ್ಖಪಂಡಿತಾಃ॥**

'ಶಾಸ್ತ್ರಗಳಲ್ಲಿ ನಿಪುಣರಾದ ಪಂಡಿತರಾದರೂ, ಲೋಕದ ಒಗೆಯನ್ನು ತಿಳಿಯದವರು, ಈ ಮೂರ್ಖ ಪಂಡಿತರ ಹಾಗೆ, ಅಪಹಾಸ್ಯಕ್ಕೆ ಒಳಗಾಗುತ್ತಾರೆ.'



### ಸಂಸ್ಕೃತಿ ಪರಿಚಯ

#### ಭಾರತೀಯ ಸಂಸ್ಕೃತಿಯ ಇತಿಹಾಸ

ಭಾರತ ವೇದಪುರಾಣಗಳ ಕಾಲದಿಂದಲೂ ಭೌಗೋಳಿಕವಾಗಿ ತನ್ನ ಸಮಗ್ರತೆಯನ್ನು ಉಳಿಸಿಕೊಂಡಿದೆ. ಪುರಾಣಗಳಲ್ಲಿ ಬರುವ **ಜಂಬೂದ್ವೀಪದ** ವರ್ಣನೆ ಇದಕ್ಕೆ ಸಾಕ್ಷಿ. ಜಂಬೂದ್ವೀಪವೆಂದರೆ ಈಗಿನ ದಕ್ಷಿಣ ಏಷಿಯಾದ ಪ್ರದೇಶ. **ಭರತವರ್ಷ** ಎಂದರೆ ಹಿಂದೂಕುಷ್ ಪರ್ವತಶ್ರೇಣಿಗಳಿಂದ ಹಿಡಿದು ಕನ್ಯಾಕುಮಾರಿಯವರೆಗೆ ಹಬ್ಬಿರುವ ವಿಶಾಲವಾದ ಭೂಭಾಗ. **ಭರತಖಂಡ**ವೆಂದರೆ ಜೈನತೀರ್ಥಂಕರ ಋಷಭದೇವನ ಮಗ ಭರತ ಆಳಿದ ದೇಶ. **ಭಾರತೀಯ ಸಂಸ್ಕೃತಿ ಎಷ್ಟು ಹಳೆಯದು?** ಪುರಾತನ ಶಿಲಾಯುಗದಿಂದಲೂ ಮಾನವನ ವಾಸ್ತವ್ಯ ಇಲ್ಲಿ ಇದ್ದುದಕ್ಕೆ ದಾಖಲೆಗಳಿವೆ. ಭಾರತದ ಅನೇಕ ಕಡೆಗಳಲ್ಲಿ ನವಶಿಲಾಯುಗದ ಕುರುಹುಗಳು ಸಿಕ್ಕಿವೆ. ಕರ್ನಾಟಕದಲ್ಲಿ ಬ್ರಹ್ಮಗಿರಿ, ಚಂದ್ರವಳ್ಳಿ, ಆನೇಕಲ್, ಬಳ್ಳಾರಿ, ಮಾಸ್ಕಿ, ರಾಯಚೂರು ಮತ್ತು ಬಿಜಾಪುರಗಳಲ್ಲಿ ನವಶಿಲಾಯುಗದ ಕುರುಹುಗಳು ದೊರೆತಿವೆ. ಇದರ ನಂತರ ನಮಗೆ ಕಂಡು ಬರುವುದು **ಸಿಂಧೂ ಸಂಸ್ಕೃತಿ**. ಹರಪ್ಪಾ ಮೊಹೆಂಜೊದಾರೋಗಳಲ್ಲಿನ ಸಿಂಧೂಸಂಸ್ಕೃತಿಯ ಅವಶೇಷಗಳ ಆವಿಷ್ಕರಣ, ಭಾರತವನ್ನು ನಾಗರಿಕತೆಯ ಉಗಮಸ್ಥಾನಗಳ ಪಟ್ಟಿಯಲ್ಲಿ ಸೇರಿಸಿತು. ಸಿಂಧೂ ಸಂಸ್ಕೃತಿಯಲ್ಲಿ ಮುಖ್ಯವಾಗಿ ನಾವು ಕಾಣುವುದು ವ್ಯವಸ್ಥಿತವಾದ ನಗರಗಳ ಯೋಜನೆ, ಉತ್ಕೃಷ್ಟ ಕಲಾಪ್ರಜ್ಞೆ ಮತ್ತು ಉನ್ನತ ಧಾರ್ಮಿಕ ಆಚರಣೆಗಳು. ೪,೦೦೦ ವರ್ಷಗಳಷ್ಟು ಹಳೆಯ ಈ ಸಂಸ್ಕೃತಿಗೂ, ಈಗಿನ ನಮ್ಮ ಕಲೆ ಮತ್ತು ಧಾರ್ಮಿಕ ಆಚರಣೆಗಳಿಗೂ ಅನೇಕ ಸಾದೃಶ್ಯಗಳಿರುವುದನ್ನು ಕಾಣುತ್ತೇವೆ. ಇಲ್ಲಿಯವರೆಗೆ ಆ ಸಂಸ್ಕೃತಿ ಮತ್ತು ವೈದಿಕ ಸಂಸ್ಕೃತಿ ಬೇರೆ ಬೇರೆ, ಆರ್ಯರು ಹೊರಗಿನಿಂದ ಬಂದು ಅದನ್ನು ನಾಶಪಡಿಸಿದರು ಎಂಬ ಭಾವನೆ ಇತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ನಡೆದ ಆವಿಷ್ಕಾರಗಳು ಮತ್ತು ಅಧ್ಯಯನಗಳು ಆರ್ಯರ ಆಕ್ರಮಣದ ವಾದ ಬರಿಯ ಕಟ್ಟು ಕಥೆ, ಸಿಂಧೂ ಸಂಸ್ಕೃತಿ ಮತ್ತು ವೈದಿಕ ಸಂಸ್ಕೃತಿ ಬೇರೆ ಬೇರೆ ಅಲ್ಲ ಎಂಬುದನ್ನು ಸಾಬೀತುಪಡಿಸಿವೆ. ಹರಪ್ಪ ಲಿಪಿಗಳಲ್ಲಿ ಕಂಡು ಬರುವ ಭಾಷೆ ಪ್ರಾಚೀನ ಸಂಸ್ಕೃತ ಭಾಷೆಯೇ ಎಂಬುದೂ ಈಗ ರುಜುವಾತಾಗಿದೆ. **ಆದ್ದರಿಂದ ವಿಶ್ವದ ಅತ್ಯಂತ ಹಳೆಯದಾದ ಏಕಮಾತ್ರ ಜೀವಂತ ಸಂಸ್ಕೃತಿಯೆಂದರೆ ಭಾರತೀಯ ಸಂಸ್ಕೃತಿ ಎಂದು ಧಾರಾಳವಾಗಿ ಹೇಳಬಹುದು.**

**(ಮುಂದಿನ ತಿಂಗಳು: ವೈದಿಕ ಸಂಸ್ಕೃತಿ)**

## ನರೇಂದ್ರನಿಂದ ಕಲಿಯಬೇಕಾದ ಪಾಠಗಳು:

### ಸಮಯಪ್ರಜ್ಞೆ

ನರೇಂದ್ರ ಮತ್ತು ಅವನ ಸ್ನೇಹಿತರು ಒಮ್ಮೆ ಗಂಗಾನದಿಯನ್ನು ದಾಟಿ ದೋಣಿಯ ಮೂಲಕ ಪ್ರಾಣಿವನಕ್ಕೆ ಹೋಗಿದ್ದರು. ಅದನ್ನು ನೋಡಿಕೊಂಡು ಬರುವಾಗ, ಒಬ್ಬ ಹುಡುಗನಿಗೆ ಹೊಟ್ಟೆ ತೊಳಸಿಬಂತು. ದೋಣಿಯಲ್ಲೇ ಅವನು ವಾಂತಿ ಮಾಡಿಕೊಂಡ. ದೋಣಿಯವರು ಕೋಪಗೊಂಡು, ಅದನ್ನು ತೆಗೆದು ಶುಚಿ ಮಾಡುವಂತೆ ಹೇಳಿದರು. ಹುಡುಗರು ಅದನ್ನು ಶುಚಿಗೊಳಿಸಲು ಹೆಚ್ಚಿಗೆ ದುಡ್ಡು ಕೊಡುತ್ತೇವೆಂದರೂ ಕೇಳಲಿಲ್ಲ. ದೋಣಿ ದಡದ ಹತ್ತಿರ ಬಂತು.

ಇತ್ತ ನರೇಂದ್ರ ಏನು ಮಾಡುವುದು ಎಂದು ಯೋಚಿಸುತ್ತಿದ್ದ. ಆಗ ಅವನಿಗೆ ಇಬ್ಬರು ಇಂಗ್ಲಿಷ್ ಸೈನಿಕರು ದಡದಲ್ಲಿ ಅಡ್ಡಾಡುವುದು ಕಂಡಿತು. ತಡಮಾಡದೆ, ದೋಣಿಯಿಂದ ದಡಕ್ಕೆ ಜಿಗಿದ; ಸೈನಿಕರ ಬಳಿಗೆ ಓಡಿದ. ತನ್ನ ಹರುಕುಮುರುಕು ಇಂಗ್ಲೀಷಿನಲ್ಲೇ ನಡೆದುದೆಲ್ಲವನ್ನೂ ಹೇಳಿದ. ಅವರಿಗೆ ಅರ್ಥವಾಯಿತು. ಗಡಸುದನಿಯಲ್ಲಿ, ಗುಡುಗಿದರು: "ಏಯ್! ಯಾರೋ ಅದು? ಆ ಹುಡುಗರನ್ನು ಈಗಲೇ ಬಿಟ್ಟರೆ ಸರಿ. ಇಲ್ಲದೇ ಹೋದರೆ, ನಿಮ್ಮನ್ನು ಶೂಟ್ ಮಾಡಿಬಿಡುತ್ತೇವೆ, ಜಾಗ್ರತೆ!" ಎಂದರು. ಅಂಬಿಗರು ಭಯ ಪಟ್ಟರು. ಹೆದರಿ, ಹಲ್ಲುಗಿಂಜುತ್ತ, ದೋಣಿಯನ್ನು ದಡಕ್ಕೆ ತಲುಪಿಸಿದರು. ಅಂತೂ ಹುಡುಗರೆಲ್ಲ ಸುರಕ್ಷಿತವಾಗಿ ದಡ ಸೇರಿದರು. ಅಂಬಿಗರಿಗೆ ಬರುತ್ತಿದ್ದ ಹೆಚ್ಚಿನ ದುಡ್ಡೂ ಸಿಗಲಿಲ್ಲ. ಅದರ ಜೊತೆಗೆ ವಾಂತಿ ತೆಗೆಯುವ ಕೆಲಸವೂ ಅಂಟಿಕೊಂಡಿತು.

**ನೀತಿ:** ಯಾವ ಸಮಯದಲ್ಲಿ ಏನು ಮಾಡಬೇಕು ಎಂಬ ತಿಳಿವಳಿಕೆ ಇರಬೇಕು, ಅದನ್ನೇ ಸಮಯಪ್ರಜ್ಞೆ ಎನ್ನುವುದು. ಜೀವನದಲ್ಲಿ ಯಶಸ್ಸು ಗಳಿಸಲು ಇದು ಅತ್ಯಾವಶ್ಯಕ.

(ಮುಂದಿನ ತಿಂಗಳು: *ಉಪಕಾರ ಮನೋಭಾವ* )



**ಪಂಚ ಮಾತೆಯರು:**

**ಗಂಗಾ ಮಾತೆ**

ನಮಗೆ ನೀರು ಬೇಕೇ ಬೇಕು. ನೀರೇ ನಮ್ಮ ಪ್ರಾಣ. ನಮ್ಮ ದೇಹದಲ್ಲಿ ೯೦ ಭಾಗ ಇರುವುದು ನೀರೇ. ನಮ್ಮ ದೇಶದಲ್ಲಿ ನೀರನ್ನು ಪೂಜ್ಯಭಾವದಿಂದ ಕಾಣುವರು. ನೀರು ಕೊಡುವ ನದಿಗಳನ್ನು ತಾಯಿ ಎಂದು ಕರೆಯುವರು. ಅವುಗಳಲ್ಲಿ ಸ್ನಾನ ಮಾಡಿದರೆ ಪವಿತ್ರರಾಗುವೆವು ಎಂದು ಭಾವಿಸುವರು. ಎಲ್ಲ ನದಿಗಳಿಗಿಂತಲೂ ಗಂಗಾ ನದಿ ಅತಿ ಪವಿತ್ರ, ನಾವು ಎಲ್ಲೇ ಸ್ನಾನ ಮಾಡಿದರೂ ಗಂಗಾನದಿಯಲ್ಲಿಯೇ ಸ್ನಾನ ಮಾಡಿದೆವು ಎಂದು ಶ್ರದ್ಧಾಳುಗಳು ಸಂಕಲ್ಪಮಾಡುವರು. ಇದು ನಾವು ನೀರಿಗೆ ಕೊಟ್ಟಿರುವ ಸ್ಥಾನ. ಪ್ರಕೃತಿಯ ಎಲ್ಲ ಅಂಶಗಳನ್ನೂ ಪೂಜಿಸುವುದೇ ಭಾರತೀಯರಾದ ನಮ್ಮ ವೈಶಿಷ್ಟ್ಯ. ಆದ್ದರಿಂದ ನೀರು ನಮಗೆ ಬರಿಯ ನೀರಲ್ಲ, ಗಂಗಾಮಾತೆ.

**ಯಶಸ್ಸಿಗೆ ಮೂರು ಸಾಧನೆಗಳು:**

**ಅಪಾರ ಶಕ್ತಿಯ ಭಾವನೆ ; ಯಾವುದಕ್ಕೂ ಅಂಜದ ನಿರ್ಭೀತಿ ; ಪ್ರಚಂಡ ಆತ್ಮವಿಶ್ವಾಸ**

ಸತ್ಯಸಂಧತೆ, ಪರಿಶುದ್ಧತೆ, ನಿಃಸ್ವಾರ್ಥತೆ—ಎಲ್ಲಿಯಾದರೂ ಇವು ಇದ್ದಲ್ಲಿ ಇವನ್ನು ಹೊಂದಿರುವವನನ್ನು ನಿರ್ಮೂಲ ಮಾಡುವ ಶಕ್ತಿ ಇಹಲೋಕದಲ್ಲಾಗಲಿ, ಪರಲೋಕದಲ್ಲಾಗಲಿ ಇಲ್ಲವೇ ಇಲ್ಲ. ಈ ಗುಣಗಳಿಂದ ಕೂಡಿರುವ ಒಬ್ಬನೇ ವ್ಯಕ್ತಿ ಏಕಾಕಿಯಾಗಿ ಇಡೀ ಪ್ರಪಂಚವೇ ಆತನ ವಿರುದ್ಧ ತಿರುಗಿಬಿದ್ದರೂ ಅದನ್ನು ಸಮರ್ಥವಾಗಿ ಎದುರಿಸಬಲ್ಲ.

– ಸ್ವಾಮಿ ವಿವೇಕಾನಂದ